520

# ಮೈಸೂರ ಗೆಜೆಟ

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ|| 27, ಸ್ಯ 1889.

ಈ ಭಾಗವನ್ನು ಪ್ರತ್ಯೇಕ ಕೀಲಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತ.

## 3ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ಚೀಫ್ ಕೋರ್ಟನಲ್ಲಿ.

1889ನೇ ಇಸವಿ ಆರ್ಜೀ ನಂಬರ್ 24.

ಆರ್ಜೀದಾರ ವೆಂಕಟರಮಣಪ್ಪ, ಮೈನರಾದ ಬೌರಿಂಗಪೇಟೇ ತಾಲ್ಲೂಕು ದೇಕಹಳ್ಳಿ ಸ್ಥಳದ ನಲ್ಲಪ್ಪನ ಆಸ್ತೀ ವಿಷಯವಲ್ಲಿ.—

ಸದರೀ ಮೈನರಾದ ನಲ್ಲಪ್ಪನಿಗೆ ಜನಕ ತಂದೆ ಆಗಬೇಕೆಂಬ ಹಕ್ಕಿನ ಮೇಲೆ ಬೌರಿಂಗಪೇಟೇ ತಾಲ್ಲೂಕು ದೇಕಹಳ್ಳೀ ಸ್ಥಳದ ವೆಂಕಟರಮಣಪ್ಪನು. ಸದರೀ ಮೈನರನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಆರ್ಜೀ ಕೊಟ್ಟು ಇರುತ್ತಾನೆ.

ಸದರೀ ಆರ್ಜೀ ಹಿಯರಿಂಗ್ ಬಗ್ಗೆ 1889ನೇ ಇಸವಿ ಜೂನ್ ತಾರೀಖು 25ನೇ ಮಂಗಳವಾರ ಮೊಕರರ್ ಮಾಡಿರುವದೆಂದು ಇದರಿಂದ ನೋಟಿಸ್ ಕೊಡಲಾಗಿದೆ.

1889ನೇ ಇಸವಿ ಏಪ್ರೆಲ್ ತಿಂಗಳು 10ನೇ ತಾರೀಖಿನಲ್ಲಿ ಜೋರ್ಟ್ ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬೈ ಆರ್ಡರ್,
ಎಲ್. ಅನಂತಸ್ವಾಮಿರಾವ್,
ರಜಿಸ್ಟ್ರಾರ್.

### ಫೈನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಆಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತಗದುಕೊಳ್ಳಲಿಕ್ಕೆ ಯಿಷ್ಟಪಡುವ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವವರ ಆಫೀಸಿಗೆ ತಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ರಾಫ್ಟಿಕೇಟೂದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಜಡ್ಸ್,